ಓದುವಾಗ ಸಣ್ಣಪುಟ್ಟ ಸಹಾಯವನ್ನು ಮಾಡುತ್ತಿದ್ದ ಪಂಚಯ್ಯಸ್ವಾಮಿಗಳು, ಈಗ ಪಿಯುಸಿಯನ್ನು ಮುಗಿಸಿದ್ದ ಆಕೆಗೆ ಮಠದ ವತಿಯಿಂದ ನಡೆಯುತ್ತಿದ್ದ ಡಿಗ್ರಿ ಕಾಲೇಜಿಗೆ ಉಚಿತವಾಗಿ ಪ್ರವೇಶ ಪಡೆಯುವಂತೆ ಮಾಡಿ, ಹಾಸ್ಟೇಲಿನಲ್ಲಿದ್ದುಕೊಂಡು ಓದಲು ಅವಕಾಶ ಮಾಡಿಕೊಟ್ಟರು. ಇದು ತಳವಾರ ಭೀಮವ್ವನಿಗೆ ಹೆಗಲ ಮೇಲಿನ ಭಾರ ಇಳಿದಂತಾಗಿ ಸಮಾಧಾನ ಪಟ್ಟಿದ್ದಳು. ಓದುವುದರಲ್ಲಿ ಜಾಣೆಯಾಗಿದ್ದ ಮಾಯಾಳ ಮೇಲೆ ಪಂಚಯ್ಯಸ್ವಾಮಿಗಳಿಗೆ ಇನ್ನಿಲ್ಲದ ಮಮಕಾರವಿತ್ತು. ಆಕೆಯೂ ಸಹ ಯಾವುದೇ ಮುಜುಗರವಿಲ್ಲದೆ ಅವರ ಮುಂದೆ ಆಗಾಗ ತನ್ನ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಿದ್ದಳು. ಅವರೂ ಅದಕ್ಕೆಲ್ಲ ತತಕ್ಷಣದಲ್ಲೇ ಸ್ಪಂದಿಸಿ ಸಹಾಯ ಮಾಡುತ್ತಿದ್ದರು. ಇದೆಲ್ಲವೂ ಕಳೆದ ಏಳೆಂಟು ತಿಂಗಳುಗಳ ವರೆಗೆ ಸರಿಯಾಗಿಯೇ ನಡೆದುಕೊಂಡು ಬಂದಿತ್ತು. ಆದರೆ, ಮಂತ್ರಿ ಶರಣಪ್ಪನ ಒತ್ತಾಯದ ಮೇರೆಗೆ ಪಂಚಯ್ಯಸ್ವಾಮಿಗಳು ಯಾವಾಗ ವಿದೇಶಿ ಪ್ರವಾಸಕ್ಕೆ ಹೋಗಿ ಬಂದರೋ ಆಗಲೇ ಮಾಯಾಳ ವಿಚಾರದಲ್ಲಿ ಏನೇನೋ ಆಲೋಚನೆಗಳು ಬಂದು ಅವರ ಸ್ವಾಸ್ಥ್ಯವೇ ಹದಗೆಡಲಾರಂಭಿಸಿತು. ಬಾಲ್ಯದಲ್ಲಿಯೇ ಲೌಕಿಕ ಬದುಕಿನಿಂದ ವಿಮುಕ್ತರಾಗಿ ಅಲೌಕಿಕ ಬದುಕಿನತ್ತ ಮುಖ ಮಾಡಿದ್ದ ಪಂಚಯ್ಯಸ್ವಾಮಿಗಳು ಕಾವಿ ತೊಟ್ಟು, ಮಠವೊಂದರ ಪೀಠಾಧಿಪತ್ಯವನ್ನು ವಹಿಸಿಕೊಂಡ ಎಷ್ಟೋ ವರ್ಷಗಳ ನಂತರದಲ್ಲಿ ಕೈಗೊಂಡ ವಿದೇಶಿ ಪ್ರವಾಸ ಅವರ ಮನಸ್ಥಿಯನ್ನೇ ಬದಲಿಸಿ ಬಿಟ್ಟಿತ್ತು. ಅದಕ್ಕೆ ಕಾರಣ ಮಾತ್ರ ತಿಳಿಯದಾದರೂ ಸಹ ಅಲ್ಲಿನ ಸಂಸ್ಕೃತಿ, ಸಂಪ್ರದಾಯ, ಗಂಡು -ಹೆಣ್ಣು ಮುಕ್ತವಾಗಿ ಬೆರೆಯುವಿಕೆ, ದೇಹ ಸಂಬಂಧದ ಬಗ್ಗೆ ಅಲ್ಲಿನ ಜನರಿಗೆ ಇರಬಹುದಾದ ಮುಕ್ತವಾದ ಮನಸ್ಥಿತಿ – ಇವೆಲ್ಲವೂ ಅಚ್ಚರಿಯೆಂಬಂತೆ ಅವರ ಅಂತರ್ಯವನ್ನು ಕದಡಿದ್ದವು. ಈ ರೀತಿಯಾಗಿ ನಮ್ಮದಲ್ಲದ ನೆಲದ ಆಚಾರ ವಿಚಾರಗಳು ಇದ್ದಕ್ಕಿದ್ದಂಗೆ ಅವರ ಮನಸ್ಸಿನ ಮೇಲೆ ಪರಿಣಾಮವನ್ನು ಬೀರುವುದರ ಮೂಲಕ ಇನ್ನಿಲ್ಲದಂಗೆ ಕಳವಳಕ್ಕೀಡು ಮಾಡಿದ್ದವು. ಮಾಯಾಳ ನೆನಪಾದರೆ ಸಾಕು ಪಂಚಯ್ಯಸ್ವಾಮಿಗಳಿಗೆ ದೇಹ ಬಯಕೆ ಹುಚ್ಚೆದ್ದು ಕಾಡಲಾರಂಭಿಸಿತ್ತು. ಆಗೆಲ್ಲ, ಅವಳಿರುವಲ್ಲಿಗೆ ಈಗಲೇ ಹೋಗಿ ಆಕೆಯ ದೇಹವನ್ನು ಮೊಗೆ ಮೊಗೆದು ಅನುಭವಿಸಲೆ? – ಎಂಬೆಲ್ಲ ಆಲೋಚನೆಗಳು ಬಂದು ಹುಚ್ಚರಂತಾಗಿ ಬಿಡುತ್ತಿದ್ದರು. ಇತ್ತಿತ್ತಲಾಗಿ ಮಾಯಾಳನ್ನು ಅನುಭವಿಸದ ತಮ್ಮ ದೇಹವಿದ್ದೂ ವ್ಯರ್ಥ ಎಂದೆನಿಸಿಬಿಟ್ಟಿತ್ತು. ಹೀಗೆ, ಆಕೆಯ ನೆನಪಿನಲ್ಲಿಯೇ ದಿನ ದಿನವೂ ಮಿಂದು ಹೋಗುತ್ತಿರುವಾಗಲೇ ಪಂಚಯ್ಯಸ್ವಾಮಿಗಳಿಗೆ ಮಾಯಾಳನ್ನು ಹೊಂದುವ ಅಂಥದೊಂದು ಸಂದರ್ಭ ಒದಗಿ ಬಂತು.



ಈಗ ಮೂರು ನಾಕು ತಿಂಗಳುಗಳ ಹಿಂದೆ ಒಂದು ರವಿವಾರದ ಇಳಿಸಂಜೆ ಹೊತ್ತು. ಮಾಯಾ ಹಾಸ್ಟೇಲಿನ ರೂಮಿನಲ್ಲಿ ಒಬ್ಬಳೇ ಇದ್ದಳು. ಅಂದು ಕಾಲೇಜಿಗೆ ರಜೆಯಾದ್ದರಿಂದ ಆಕೆಯ ರೂಮಿನಲ್ಲಿದ್ದ ಇನ್ನೊಂದಿಬ್ಬರು ಹುಡುಗಿಯರು ಶನಿವಾರದಂದೇ ಊರಿಗೆ ಹೋಗಿದ್ದರು. ಹೀಗಾಗಿ, ಮಾಯಾಳಿಗೆ ಒಬ್ಬಳೇ ರೂಮಿನಲ್ಲಿದ್ದು ಬೇಸರವೆನಿಸಿತ್ತು. ಅದಕ್ಕೇ, ಆ ಬೇಸರ ಕಳೆಯಲು ಆಕೆ ಮಠದತ್ತ ಹೋಗಿ ಬರಬೇಕೆಂದುಕೊಂಡಳು. ಮಾಯಾ ರೂಮಿನ ಬಾಗಿಲನ್ನು ಹಾಕಿಕೊಂಡು ಮಠದತ್ತ ನಡೆದಳು.

ಮಾಯಾ ಮಠಕ್ಕೆ ಬಂದಾಗ ಅಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ಇದ್ದರು. ಅವರೆಲ್ಲ ಮಠದ ಆವರಣದಲ್ಲಿರುವ ಆಲದ ಗಿಡದ ಕೆಳಗೆ